File No.AGRI-AAE/25/2019-AGRI_PLAN_B-AGRICULTURE Secretariat

**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ: ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ಸೂಕ್ಷ್ಮ ನೀರಾವರಿ ಕಾರ್ಯಕ್ರಮದಡಿ 2019-20ನೇ ಸಾಲಿನ ಮೊದಲನೇ ಕಂತಿನ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ: 1.ಸರ್ಕಾರದ ಆದೇಶ ಸಂಖ್ಯೆ: ಕೃಇ 41 ಕೃಯೋಕಾ 2019, ದಿನಾಂಕ: 02.04.2019.

2.ದಿನಾಂಕ: 21.06.2019 ರಂದು ನಡೆದ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯ ರಾಜ್ಯ ಮಟ್ಟದ ಸಮಿತಿ ಸಭೆಯ ನಡವಳಿ.

3.ಕೇಂದ್ರ ಸರ್ಕಾರದ ಪತ್ರ ಸಂಖ್ಯೆ:18-10/2018 RFS-III, ದಿನಾಂಕ:20.08.2019.

4.ಆರ್ಥಿಕ ಇಲಾಖೆ ಜಮಾ ಧೃಡೀಕರಣ ಪತ್ರ ಸಂಖ್ಯೆ: ಆಇ 20 ಬಿಜಿಎಲ್ 2019, ದಿನಾಂಕ: 23.08.2019.

5. ಕೃಷಿ ಆಯುಕ್ತರ ಪತ್ರ ಸಂ: ಉಕೃನಿ/ ಕೃಯಾಂ&ಸೂನೀ/ಸೂನೀ/ PMKSY/ಅ.ಬಿ/2019-20, ದಿ:26.08.2019.

**ಪ್ರಸ್ತಾವನೆ:**

2019-20ನೇ ಸಾಲಿನ ಆಯವ್ಯಯ ಸಂಪುಟ-3ರಲ್ಲಿ ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ಸೂಕ್ಷ್ಮ ನೀರಾವರಿ ಕಾರ್ಯಕ್ರಮ ಲೆಕ್ಕ ಶೀರ್ಷಿಕೆ: 2401-00-108-1-15 ರಡಿ ಒಟ್ಟು ರೂ. 36818.00 ಲಕ್ಷ ಅನುದಾನವನ್ನು ಈ ಕೆಳಕಂಡಂತೆ ನಿಗದಿಪಡಿಸಲಾಗಿರುತ್ತದೆ.

| ಕ್ರ.ಸಂ | ಉಪ ಶೀರ್ಷಿಕೆ | ಅನುದಾನ (ರೂ. ಲಕ್ಷಗಳಲ್ಲಿ) |
|---|---|---|
| 1. | 059 | 50.00 |
| 2. | 106 | 24350.00 |
| 3. | 422 | 6500.00 |
| 4. | 423 | 2700.00 |
| 5. | 436 | 3218.00 |
| | **ಒಟ್ಟು** | **36818.00** |

ಮೇಲೆ ಓದಲಾದ (1)ರ ಸರ್ಕಾರದ ಆದೇಶದಲ್ಲಿ ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ಸೂಕ್ಷ್ಮ ನೀರಾವರಿ ಕಾರ್ಯಕ್ರಮವನ್ನು 2019-20ನೇ ಸಾಲಿನಲ್ಲಿಯೂ ಮುಂದುವರೆಸಿ ಅನುಷ್ಠಾನಗೊಳಿಸಲು ಅನುಮೋದನೆ ನೀಡಲಾಗಿದೆ.

...2/-

ಮೇಲೆ ಓದಲಾದ (2)ರ ದಿನಾಂಕ: 21.06.2019 ರಂದು ನಡೆದ ರಾಜ್ಯ ಮಟ್ಟದ ಮಂಜೂರಾತಿ ಸಮಿತಿ ಸಭೆಯಲ್ಲಿ ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲು ಅನುಮೋದನೆ ನೀಡುತ್ತಾ 2019–20ನೇ ಸಾಲಿಗೆ ವಿವಿಧ ಇಲಾಖೆಗಳಿಗೆ ಕೆಳಕಂಡಂತೆ ರೂ. 149316.00 ಲಕ್ಷಗಳ ಅನುದಾನದ ಕ್ರಿಯಾ ಯೋಜನೆಯನ್ನು ಅನುಮೋದಿಸಲಾಗಿದೆ. ಅದರಂತೆ ಕೃಷಿ ಇಲಾಖೆಗೆ ರೂ.72595.00 ಲಕ್ಷಗಳ ಮೊತ್ತದ ಕ್ರಿಯಾ ಯೋಜನೆಗೆ ಅನುಮೋದನೆ ದೊರಕಿರುತ್ತದೆ.

(ರೂ. ಲಕ್ಷಗಳಲ್ಲಿ)

| ಇಲಾಖೆ | ಕೇಂದ್ರದ ಪಾಲು | ರಾಜ್ಯದ ಪಾಲು | ಒಟ್ಟು |
|---|---|---|---|
| ಕೃಷಿ | 24682.00 | 47913.00 | 72595.00 |
| ತೋಟಗಾರಿಕೆ | 23404.00 | 47517.00 | 70921.00 |
| ರೇಷ್ಮೆ | 1914.00 | 3886.00 | 5800.00 |
| **ಒಟ್ಟು** | **50000.00** | **99316.00** | **149316.00** |

ಮೇಲೆ ಓದಲಾದ (3)ರ ಕೇಂದ್ರ ಸರ್ಕಾರದ ಪತ್ರ ದಿನಾಂಕ: 20.08.2019 ರಲ್ಲಿ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ಸೂಕ್ಷ್ಮ ನೀರಾವರಿ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಮೊದಲನೇ ಕಂತಿನ ಅನುದಾನವಾಗಿ ಒಟ್ಟು ರೂ. 19200.00 ಲಕ್ಷಗಳ ಕೇಂದ್ರ ಸರ್ಕಾರದ ಅನುದಾನವನ್ನು ಬಿಡುಗಡೆಗೊಳಿಸಿದ್ದು, ಇದರಲ್ಲಿ ಶೇ.20 ರಷ್ಟು ಅನುದಾನವನ್ನು ಅಂದರೆ ರೂ.3840.00 ಲಕ್ಷಗಳನ್ನು Per Drop More crop – Other Interventions ಅನುಷ್ಠಾನಕ್ಕಾಗಿ ಬಳಸಿಕೊಳ್ಳಲು ತಿಳಿಸಲಾಗಿರುತ್ತದೆ. ಉಳಿದ ಅನುದಾನವಾದ ರೂ.15360.00 ಲಕ್ಷಗಳಲ್ಲಿ ಕೃಷಿ ಇಲಾಖೆಯ ಪಾಲು ಒಟ್ಟು ರೂ.7582.31 ಲಕ್ಷಗಳಾಗಿದ್ದು, ವಿವರ ಈ ಕೆಳಕಂಡಂತಿರುತ್ತದೆ.

(ರೂ. ಲಕ್ಷಗಳಲ್ಲಿ)

| ಕ್ರ.ಸಂ | ವರ್ಗ | ಕೇಂದ್ರದ ಪಾಲು |
|---|---|---|
| 1 | ಸಾಮಾನ್ಯ (106) | 5686.73 |
| 2 | ವಿಶೇಷ ಘಟಕ ಯೋಜನೆ (422) | 1364.82 |
| 3 | ಗಿರಿಜನ ಉಪಯೋಜನೆ (423) | 916.64 |
|  | ಒಟ್ಟು ಮೊತ್ತ | 7582.31 |

ಸದರಿ ಅನುದಾನವು ರಾಜ್ಯಕ್ಕೆ ಜಮೆಯಾಗಿರುವ ಕುರಿತು ಮೇಲೆ ಓದಲಾದ ಕ್ರಮಾಂಕ (4)ರಲ್ಲಿನ ಆರ್ಥಿಕ ಇಲಾಖೆ ಜಮಾ ಧೃಡೀಕರಣ ಪತ್ರದಲ್ಲಿ ಧೃಡೀಕರಿಸಲಾಗಿರುತ್ತದೆ.

File No.AGRI-AAE/25/2019-AGRI_PLAN_B-AGRICULTURE Secretariat

ಮೇಲೆ ಓದಲಾದ (5)ರ ಕೃಷಿ ಆಯುಕ್ತರ ಪತ್ರದಲ್ಲಿ ಪ್ರಸ್ತುತ ಕೇಂದ್ರ ಸರ್ಕಾರದಿಂದ ಬಿಡುಗಡೆಯಾಗಿರುವ ಮೊದಲನೇ ಕಂತಿನ ಅನುದಾನ ರೂ.19200.00 ಲಕ್ಷಗಳ ಅನುದಾನದಲ್ಲಿ ರೂ.7582.31 ಲಕ್ಷಗಳು ಕೃಷಿ ಇಲಾಖೆಗೆ ಮೀಸಲಾಗಿದ್ದು ಸದರಿ ಅನುದಾನಕ್ಕೆ ಅನುಗುಣವಾಗಿ ರಾಜ್ಯದ ಪಾಲಿನ ಅನುದಾನ ರೂ. 14648.89 ಲಕ್ಷಗಳು ಸೇರಿದಂತೆ ಒಟ್ಟಾರೆ ರೂ. 22231.20 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಪ್ರಸ್ತುತ ಆಯವ್ಯಯದಲ್ಲಿ ಲಭ್ಯವಿರುವ ಅನುದಾನದಿಂದ ಅಗತ್ಯ ಅನುದಾನ ಬಿಡುಗಡೆ ಮಾಡಲು ಅನುವಾಗುವಂತೆ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಕೃಇ 25 ಕೃಕೈಲು 2019, ಬೆಂಗಳೂರು, ದಿನಾಂಕ: 12.09.2019**

2019–20ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ: 2401–00–108–1–15 ಅಡಿ ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ಸೂಕ್ಷ್ಮ ನೀರಾವರಿ ಕಾರ್ಯಕ್ರಮ ಅನುಷ್ಠಾನಕ್ಕೆ ಒದಗಿಸಲಾಗಿರುವ ಅನುದಾನದಲ್ಲಿ ಮೊದಲನೇ ಕಂತಿನ ಅನುದಾನ ರೂ.22231.20 ಲಕ್ಷಗಳನ್ನು (ಇಪ್ಪತ್ತೆರಡು ಸಾವಿರದ ಇನ್ನೂರ ಮೂವತ್ತೊಂದು ಲಕ್ಷದ ಇಪ್ಪತ್ತು ಸಾವಿರ ರೂಪಾಯಿಗಳು ಮಾತ್ರ) ಈ ಕೆಳಕಂಡಂತೆ ಉಪ ಶೀರ್ಷಿಕೆವಾರು ಬಿಡುಗಡೆ ಮಾಡುತ್ತಾ, ಕೇಂದ್ರ ಹಾಗೂ ರಾಜ್ಯದ ಪಾಲಿನ ಅನುದಾನದ ಅನುಪಾತವನ್ನು ನಿಗಧಿತ ಪ್ರಮಾಣದಲ್ಲಿ ಹಂಚಿಕೆ ಮಾಡಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಸರ್ಕಾರವು ಈ ಮೂಲಕ ಮಂಜೂರಾತಿ ನೀಡಿದೆ.

(ರೂ.ಲಕ್ಷಗಳಲ್ಲಿ)

| ಉಪ ಶೀರ್ಷಿಕೆ | ಕೇಂದ್ರದ ಪಾಲು | ರಾಜ್ಯದ ಪಾಲು | ಒಟ್ಟು |
|---|---|---|---|
| 106 | 5686.73 | 11375.17 | 17061.90 |
| 422 | 1364.82 | 2357.08 | 3721.90 |
| 423 | 530.76 | 916.64 | 1447.40 |
| ಒಟ್ಟು | 7582.31 | 14648.89 | 22231.20 |

ಕೃಷಿ ನಿರ್ದೇಶಕರು ಕೇಂದ್ರ ಸರ್ಕಾರವು ಆಗಿಂದ್ದಾಗ್ಗೆ ಹೊರಡಿಸುವ ಮಾರ್ಗಸೂಚಿ ಅನುಸಾರ ಯೋಜನೆಯನ್ನು ಅನುಷ್ಠಾನಗೊಳಿಸತಕ್ಕದ್ದು.

...4/-

File No.AGRI-AAE/25/2019-AGRI_PLAN_B-AGRICULTURE Secretariat

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ ಎಫ್.ಡಿ/01/ಟಿಎಫ್‌ಪಿ/2019 ದಿ:03-04-2019 ರಲ್ಲಿ ಸರ್ಕಾರದ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಲಾಗಿರುವ ಆರ್ಥಿಕ ಅಧಿಕಾರದ ಮೇರೆಗೆ ಹಾಗೂ ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂಖ್ಯೆ: ಕೃಇ 09 ಆಂಆಸ 2019, ದಿನಾಂಕ:09.09.2019 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

BS Nagarathnam

(ಬಿ.ಎಸ್.ನಾಗರತ್ನಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ (ಯೋಜನೆ)

ಇವರಿಗೆ:-

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್ ಎಸ್ ಎ) / (ಇ & ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು-01.
2. ಪ್ರಧಾನ ಮಹಾಲೇಖಪಾಲರು (A&E), ಕರ್ನಾಟಕ, ಬೆಂಗಳೂರು.
3. ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
6. ಸರ್ಕಾರದ ಕಾರ್ಯದರ್ಶಿ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ, ಬೆಂಗಳೂರು.
7. ಕೃಷಿ ಆಯುಕ್ತರು/ಕೃಷಿ ನಿರ್ದೇಶಕರು, ಶೇಷಾದ್ರಿ ರಸ್ತೆ, ಬೆಂಗಳೂರು.
8. ಆಯುಕ್ತರು/ ನಿರ್ದೇಶಕರು, ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು
9. ಆಯುಕ್ತರು/ ನಿರ್ದೇಶಕರು, ತೋಟಗಾರಿಕೆ ಇಲಾಖೆ, ಬೆಂಗಳೂರು.
10. ಆಯುಕ್ತರು/ ನಿರ್ದೇಶಕರು, ರೇಷ್ಮೆ ಇಲಾಖೆ, ಬೆಂಗಳೂರು.
11. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
12. ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು
13. ನಿರ್ದೇಶಕರು, TNMC ಖನಿಜ ಭವನ ಬೆಂಗಳೂರು.
14. ಸರ್ಕಾರದ ಅಧೀನ ಕಾರ್ಯದರ್ಶಿ (FR & CC), ಆರ್ಥಿಕ ಇಲಾಖೆ, ಬೆಂಗಳೂರು.
15. ಸರ್ಕಾರದ ಅಧೀನ ಕಾರ್ಯದರ್ಶಿ (ವೆಚ್ಚ- 4&5), ಆರ್ಥಿಕ ಇಲಾಖೆ, ಬೆಂಗಳೂರು
16. ಆಂತರಿಕ ಆರ್ಥಿಕ ಸಲಹೆಗಾರರು ಕೃಷಿ ಮತ್ತು ತೋಟಗಾರಿಕೆ ಇಲಾಖೆ, ಬೆಂಗಳೂರು.
17. ಶಾಖೆಯ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

****